## ದುಪ್ಪಟ್ಟು ಸಂಬಳ

ಮೂರ್ತಿಯೊಂದರ ಕೆತ್ತನೆ ಕೆಲಸಕ್ಕೆ ನಿಪುಣ ಶಿಲ್ಪಿಯ ಅಗತ್ಯವಿತ್ತು. ಹತ್ತುಸಾವಿರ ರೂಪಾಯಿ ಸಂಬಳ ನೀಡುವುದಾಗಿ ಸಂಬಂಧಿಸಿದವರು ಜಾಹೀರಾತು ನೀಡಿದರು. ಯುವಕನೊಬ್ಬ ಬಂದು ಇಪ್ಪತ್ತು ಸಾವಿರ ರೂಪಾಯಿ ಸಂಬಳ ಕೇಳಿದ. 'ಹಾಗಿದ್ದರೆ ಎಷ್ಟು ವರ್ಷದ ಅನುಭವ ಇದೆ ನಿನಗೆ?' ಎಂದು ಶಿಲ್ಪಿಯ ಅಗತ್ಯ ಇರುವವರು ಕೇಳಿದರು. ಅದಕ್ಕವನು, 'ಅನುಭವ ಇಲ್ಲವೇ ಇಲ್ಲ ಸರ್' ಎಂದ. 'ಮತ್ತೆ ನಿಮಗೆ ದುಪ್ಪಟ್ಟು ಸಂಬಳ ಯಾಕೆ ಕೊಡಬೇಕು?' ಎಂದು ಕೇಳಿದಾಗ, 'ಅನುಭವವಿರುವ ಇರುವ ಕೆಲಸಗಾರನಿಗೆ ಹತ್ತು ಸಾವಿರ ಕೊಡುವಿರಾದರೆ, ನಾನು ಆ ಕೆಲಸವನ್ನು ಕಲಿತು ನಂತರ ಅದನ್ನು ಮಾಡಿಕೊಡಬೇಕಲ್ಲವೆ? ಅದಕ್ಕೆ ಡಬಲ್ ಕೇಳಿದೆ' ಎಂದ ಆ ಯುವಕ!

**ಪ.ನಾ. ಹಳ್ಳಿ ಹರೀಶ್‌ಕುಮಾರ್**



## ಬೇಸ್ತು

ಒಮ್ಮೆ ಖ್ಯಾತ ವಾಗ್ಮಿಯೊಬ್ಬರು ಸೇಬುಹಣ್ಣು ಕೊಳ್ಳಲು ಹೋದರು. ಅಂಗಡಿಯವ ಕೆ.ಜಿ.ಗೆ 200 ರೂಪಾಯಿ ಹೇಳಿದ. 180 ರೂಪಾಯಿಗೆ ಕೊಡುವಂತೆ ಅವರು ಪಟ್ಟು ಹಿಡಿದರು. ಆತ ಹಾಗೆ ಕೊಟ್ಟರೆ ಲಾಭ ಉಳಿಯುವುದಿಲ್ಲ ಎಂದರೂ ಅವರು ಕೇಳಲಿಲ್ಲ. ಕೊನೆಗೆ 'ಆಯ್ತು ತೆಗೆದುಕೊಳ್ಳಿ' ಎಂದು ಕೊಟ್ಟ. 200 ರೂಪಾಯಿಗೆ 20 ರೂಪಾಯಿ ಚಿಲ್ಲರೆಯನ್ನು ಅವರಿಗೆ ವಾಪಸ್ಸು ಕೊಟ್ಟ. ಅದೇ ವೇಳೆಗೆ ಭಿಕ್ಷುಕನೊಬ್ಬ, 'ಸ್ವಾಮಿ ಮೂರು ದಿನದಿಂದ ಊಟ ಇಲ್ಲ, ಏನಾದರೂ ಸಹಾಯಮಾಡಿ' ಅಂದ. ಚೌಕಾಸಿ ಮಾಡಿ ಉಳಿಸಿದ್ದ ಆ 20 ರೂಪಾಯಿಯನ್ನು ಭಿಕ್ಷುಕನಿಗೆ ಆ ವಾಗ್ಮಿ ಕೊಟ್ಟುಬಿಟ್ಟರು. ಆಗ ಹಣ್ಣಿನ ಅಂಗಡಿಯವನು ನಗುತ್ತಿರುವುದನ್ನ ಗಮನಿಸಿ ಅದಕ್ಕೆ ಕಾರಣ ಕೇಳಿದರು.



'ಸಾರ್, ಇವನಿಂದ ನಾನು ₹10,000 ಸಾಲ ತೆಗೆದುಕೊಂಡು ನ್ಯಾಯಯುತವಾಗಿ ದುಡಿಯುತ್ತಿದ್ದೇನೆ. ನನ್ನ ಹತ್ತಿರ ಚೌಕಾಸಿ ಮಾಡಿದ್ರಿ. ಆತ ಹೀಗೆ ಭಿಕ್ಷೆ ಬೇಡಿದ ದುಡ್ಡನ್ನು ಬಡ್ಡಿಗೆ ಕೊಡ್ತಾನೆ. ಅಂತಹವನಿಗೆ ಹಣ ಕೊಟ್ರೆ, ಅದಕ್ಕೇ ನಗು ಬಂತು' ಅಂದ.

**ಮುರಳಿ ನಾಗವಾರ**

ಕಲೆ: ಗಣೇಶ ಆಚಾರ್ಯ